ದಿನಾಂಕಃ 20–08–2024 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣಿ ಕರಿಸಲಾಯಿತು.

**ಮುಂದುವರೆದ ಪಾಟೀ ಸವಾಲುಃ ಪ್ರತಿವಾದಿ 1 ರ ಪರ ಶ್ರೀ. ಎಸ್.ಆರ್ .ಬಿ ವಕೀಲರಿಂದ**

14. ದಾವಾ ಸ್ವತ್ತುಗಳ ಪೈಕಿ ಒಂದು ಆಸ್ತಿಗೆ ಸಂಬಂಧಪಟ್ಟಂತೆ 1 ನೇ ಪ್ರತಿವಾದಿ ನನಗೆ ಮಾರಾಟ ಮಾಡುತ್ತೇನೆ ಎಂದು ಕರಾರು ಮಾಡಿಕೊಂಡಿದ್ದಾರೆ ಎಂದರೆ ಸರಿಯಲ್ಲ. ಆ ಪ್ರಕಾರ 2 ನೇ ವಾದಿ, 3 ನೇ ವಾದಿ, ನಾನು, 9 ನೇ ಪ್ರತಿವಾದಿ, 7 ನೇ ಪ್ರತಿವಾದಿ, 6 ನೇ ಪ್ರತಿವಾದಿ, 2 ನೇ ಪ್ರತಿವಾಧಿ , 4 ನೇ ಪ್ರತಿವಾದಿಯಾರೆಲ್ಲರೂ ಸೇರಿಕೊಂಡು ಗುಂಟೆಗೆ ರೂ. 1 ಲಕ್ಷ ಮಾರಾಟ ಮಾಡಬೇಕೆಂದು ಮಾತುಕತೆ ಮಾಡಿದ್ದೇವೆ ಎಂದರೆ ಸರಿಯಲ್ಲ.ಆ ಮಾತುಕತೆ ಪ್ರಕಾರ ನನಗೆ ಹಾಗೂ 9 ನೇ ಪ್ರತಿವಾದಿಗೆ ತಲಾ 4 ½ ಗುಂಟೆ ಮಾರಾಟ ಮಾಡಿರುವುದಾಗಿ ಮಾತುಕತೆ ಆಗಿದೆ ಎಂದರೆ ಸಾಕ್ಷಿ ಕ್ರಯ ಯಾವುದು ಇಲ್ಲ ನಮಗೆ ಭಾಗ ಕೊಡುವುದು ಮಾತ್ರ ಮಾತುಕತೆ ಆಗಿದೆ ಎಂದು ನುಡಿಯುತ್ತಾರೆ . ಆ ಮಾತು ಕತೆ ಪ್ರಕಾರ ನಾನು ರೂ. 50,000/– ಮುಂಗಡ ಹಣ 1 ನೇ ಪ್ರತಿವಾದಿಗೆ ನೀಡಿದ್ದೇನೆ ಎಂದರೆ ಸಾಕ್ಷಿ ಕ್ರಯದ ಸಂಬಂಧ ಕೊಟ್ಟಿಲ್ಲ, ನಮ್ಮ ಹೆಸರಿಗೆ ಆಸ್ತಿ ಹೆಸರಿಗೆ ಮಾಡಿಕೊಡಲು ಕೊಟ್ಟಿರುವುದು ಎಂದು ನುಡಿಯುತ್ತಾರೆ. ಆ ರೂ. 50,000/– ವನ್ನು ಸುಮಾರು 7 ವರ್ಷಗಳ ಹಿಂದೆ ನೀಡಿರುವುದಾಗಿರುತ್ತದೆ. ಆಗ ಆ ಹಣದ ಬಗ್ಗೆ ಬರವಣಿಗೆ ಮಾಡಿಕೊಂಡಿಲ್ಲ. ಆ ರೂ.50,000/– ಕ್ರಯದ ಬಾಬ್ತು 1 ನೇ ಪ್ರತಿವಾದಿ ಪಡೆದುಕೊಂಡು ನನಗೆ ಕರಾರು ಪತ್ರ ಬರೆದುಕೊಟ್ಟಿದ್ದಾರೆಂದರೆ ಸರಿಯಲ್ಲ. ಉಳಿದವರು ಎಷ್ಟು ಹಣ ಕೊಟ್ಟಿದ್ದಾರೆಂದು ನನಗೆ ಗೊತ್ತಿಲ್ಲ. ಅವರು ಕೂಡ ಕ್ರಯ ಬಾಬ್ತು ಆ ರೀತಿ ಮುಂಗಡ ಹಣ ನೀಡಿದ್ದು ಎಂದರೆ ಸರಿಯಲ್ಲ.

15. ಆ ವರ್ಗಾವಣೆ ಬಾಬ್ತು ನಾನು ಹಾಗೂ ಇತರರು 1 ನೇ ಪ್ರತಿವಾದಿ ಜೊತೆ 11 ಇ ನಕಾಶೆಗೆ ಅರ್ಜಿ ಸಲ್ಲಿಸಿದ್ದೇವೆ ಎಂದರೆ ಸರಿಯಲ್ಲ. ಆ ಸಮಯದಲ್ಲಿ 2 ನೇ ವಾದಿ ಮತ್ತು ನಾನು 1 ನೇ ಪ್ರತಿವಾದಿಯಿಂದ 2-3 ಖಾಲಿ ಕಾಗದಗಳಿಗೆ ಸಹಿಗಳನ್ನು ಪಡೆದುಕೊಂಡಿದ್ದೇವೆ ಎಂದರೆ ಸರಿಯಲ್ಲ. ಆ ನಂತರ 1 ನೇ ಪ್ರತಿವಾದಿ ಭೂಮಾಪನ ಇಲಾಖೆಗೆ ನಾವು ಸಲ್ಲಿಸಿದ ಅರ್ಜಿಯ ನಕಲನ್ನು ನೀಡಲು ಕೇಳಿದರು ಎಂದರೆ ಸರಿಯಲ್ಲ. ನಾವು ಆರ್ಜಿಯ ನಕಲು ಅವರಿಗೆ ನೀಡದೇ ಇದ್ದುದರಿಂದ ಅವರು ಸಂಶಯಗೊಂಡು ಭೂಮಾಪನ ಇಲಾಖೆಗೆ ಹೋಗಿ ವಿಚಾರಿಸಿದಾಗ ನಾವು ದಾನ ಪತ್ರ ತಯಾರಿಸಲು ನಕಾಶೆಗೆ ಅರ್ಜಿ ಕೊಟ್ಟಿರುವುದು ಅವರಿಗೆ ಗೊತ್ತಾಯಿತು ಎಂದರೆ ಸರಿಯಲ್ಲ. ಆಗ 1 ನೇ ಪ್ರತಿವಾದಿ ಆ ನಕಾಶೆಯ ಅರ್ಜಿಗೆ ತಕರಾರು ಸಲ್ಲಿಸಿದರು ಎಂದರೆ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ನನ್ನ ಹೆಸರಿಗೆ ಜಾಗ ಮಾಡಿಕೊಳ್ಳಲು ನಕಾಶೆಗೆ ಅರ್ಜಿ ನೀಡಬೇಕು ಎಂಬ ವಿಚಾರ ನನಗೆ ಗೊತ್ತಿದೆ ಎಂದರೆ ಸರಿ. ಆ ನಕಾಶಗೆ ಸಲ್ಲಿಸಿದ ಅರ್ಜಿ ಹಾಗೂ ಆ ಆರ್ಜಿಯಂತೆ ತಯಾರಿಸಿದ ನಕಾಶೆಯನ್ನು ಹಾಜರು ಪಡಿಸಲು ನನಗೆ ತೊಂದರೆ ಇಲ್ಲ ಎಂದರೆ ಸಾಕ್ಷಿ ಅದು ನನ್ನ ಬಳಿ ಇಲ್ಲ ಎಂದು ನುಡಿಯುತ್ತಾರೆ. ಆ ಆರ್ಜಿ ಮತ್ತು ನಕಾಶೆ ಯಾರ ಬಳಿ ಇದೆ ಎಂದು ನನಗೆ ಗೊತ್ತಿಲ್ಲ.

16. 7 ವರ್ಷಗಳ ಹಿಂದೆ ರೂ. 50,000/- ನೀಡಿದ್ದರೂ ಹೆಸರಿಗೆ ಜಾಗ ಮಾಡಿಕೊಡದೇ ಇದ್ದುದರಿಂದ ಆ ಬಗ್ಗೆ ನೋಟಿಸು ಕೊಟ್ಟಿಲ್ಲ. ಈ ತನಕ 1 ನೇ ಪ್ರತಿವಾದಿ ನಾನು ನನ್ನ ಹೆಸರಿಗೆ ಮಾಡಿಕೊಡಿ ಎಂದು ನೋಟಿಸು ಕೊಟ್ಟಿಲ್ಲ. 1 ನೇ ಪ್ರತಿವಾದಿ ನನಗೆ ಕ್ರಯಕ್ಕೆ ಕೊಡುವ ಮಾತುಕತೆ ಮಾತ್ರ ಮಾಡಿದ್ದು ಬೇರೆ ಯಾವದೇ ರೀತಿಯಲ್ಲಿ ಕೊಡುವ ಮಾತುಕತೆ ಮಾಡಿಲ್ಲ ಎಂದರೆ ಸರಿಯಲ್ಲ.

17. 1 ನೇ ಪ್ರತಿವಾದಿಗೆ ವಾಂಟಣೆ ಮಾಡಿಕೊಡಿ ಎಂದು ಮೊದಲು ನೋಟಿಸು ಕೊಟ್ಟಿಲ್ಲ. ಬೇರೆ ಪಕ್ಷಗಾರರು ಅವರಿಗೆ ನೋಟಿಸು ಕೊಟ್ಟಿದಾರಾ ಎಂದು ನನಗೆ ಗೊತ್ತಿಲ್ಲ. ನಾನು ಅವರಿಗೆ ನೋಟಿಸು

ಕೊಟ್ಟಿದ್ದೇನೆ ಹಾಗೂ ಅದಕ್ಕೆ 1 ನೇ ಪ್ರತಿವಾದಿ ತನ್ನ ವಕೀಲರ ಮೂಲಕ ಈ ದಾವೆ ಸ್ವತ್ತುಗಳಲ್ಲಿ ಯಾವುದೇ ನನಗೆ ಹಕ್ಕಿಲ್ಲ ಎಂದು ಉತ್ತರ ಕೊಟ್ಟಿದ್ದಾರೆ ಎಂದರೆ ಸರಿಯಲ್ಲ. ಆ ರೀತಿ ಉತ್ತರ ಕೊಟ್ಟ ನಂತರ ನಾವು ಜಮೀನನ್ನು ಕ್ರಯಕ್ಕೆ ಪಡೆದುಕೊಳ್ಳಲು ಮೇಲೆ ಹೇಳಿದಂತೆ ಮಾತುಕತೆ ಮಾಡಿರುವುದು ಎಂದರೆ ಸರಿಯಲ್ಲ. ಉಳಿದ ಕ್ರಯದ ಹಣವನ್ನು ಹಾಗೂ ಮುದ್ರಾಂಕ ಶುಲ್ಕವನ್ನು ಕ್ರಯದ ದಸ್ತು ಸಂಬಂಧಪಟ್ಟಂತೆ ತಪ್ಪಿಸಲು ದಾನ ಪತ್ರ ತಯಾರಿಸಲು ನಕಾಶೆಗೆ ಅರ್ಜಿ ಕೊಟ್ಟಿದ್ದೇವೆ ಎಂದರೆ ಸರಿಯಲ್ಲ. ಆ ಪ್ರಕಾರ ದಾನ ಪತ್ರಕ್ಕೆ ಎಂದು ನಾವೆಲ್ಲರೂ ಪ್ರತ್ಯೇಕವಾಗಿ ನಕಾಶೆಗಳನ್ನು ಪಡೆದುಕೊಂಡಿದ್ದೇವೆ ಎಂದರೆ ಸರಿಯಲ್ಲ. 1 ನೇ ಪ್ರತಿವಾದಿ ಆ ದಾನ ಪತ್ರ ಮಾಡಲು ಒಪ್ಪದೇ ಇದ್ದುದರಿಂದ ಸ್ವಯಾರ್ಜಿತ ಅಸ್ತಿಯನ್ನು ಸುಳ್ಳಾಗಿ ಪಿತ್ರಾರ್ಜಿತ ಆಸ್ತಿ ಎಂದು ಹೇಳಿ ಈ ಸುಳ್ಳು ದಾವೆ ಸಲ್ಲಿಸಿದ್ದೇವೆ ಎಂದರೆ ಸರಿಯಲ್ಲ. ದಾವಾ ಸ್ವತ್ತು 1 ನೇ ಪ್ರತಿವಾದಿಯ ಕುಟುಂಬದ ಸ್ವಯಾರ್ಜಿತ ಹಾಗೂ ಪಿತ್ರಾರ್ಜಿತ ಆಸ್ತಿಯಾಗಿರುತ್ತದೆ ಎಂದರೆ ಸರಿಯಲ್ಲ.ದಾವಾ ಸ್ವತ್ತು ಭೂನ್ಯಾಯ ಮಂಡಳಿಯ ಆದೇಶದಂತೆ ಕೃಷ್ಣಾರವರಿಗೆ ಬಂದು ನಂತರ ಜಾನಕಿಯವರಿಗೆ ಹಕ್ಕು ಪ್ರಾಪ್ತವಾಗಿ ನಂತರ 1 ನೇ ಪ್ರತಿವಾದಿಗೆ ಬಂದಿದೆ ಎಂದರೆ ಸರಿಯಲ್ಲ. ನನಗೆ ಈ ದಾವೆಯಲ್ಲಿ ಭಾಗ ಕೇಳಲು ಯಾವುದೇ ದಾವಾ ಕಾರಣ ಇಲ್ಲ ಎಂದರೆ ಸರಿಯಲ್ಲ. ದಾನ ಪತ್ರಕ್ಕೆ ಸಂಭಂಧಿಸಿದಂತೆ ತಯಾರಿಸಿದ ನಕ್ಷೆ ಹಾಗೂ ಇತರ ದಾಖಲೆಗಳು ನನ್ನ ಬಳಿ ಇದ್ದರೂ ಕೂಡ ಇಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯಂತೆ ಬೆರಳಚ್ಚು ಮಾಡಿಸಲಾಯಿತು)

ಓ ಹೇ ಕೆ ಸರಿ ಇದೆ.

ಹಿರಿಯ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ.,
ಅಂಕೋಲಾ.